**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನ ಸಭೆ**
**ಎಂಟನೇ ಅಧಿವೇಶನ**

# ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2015

**(2015ರ ವಿಧಾನಸಭೆಯ ವಿಧೇಯಕ ಸಂಖ್ಯೆ – 24)**

ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ನ್ನು (1985ರ ಕರ್ನಾಟಕ ಅಧಿನಿಯಮ 4) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 12ನೇ ಪ್ರಕರಣದ ತಿದ್ದುಪಡಿ.**- ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ (1985ರ ಕರ್ನಾಟಕ ಅಧಿನಿಯಮ 4) 12ನೇ ಪ್ರಕರಣದ (6)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(6) ಈ ಅಧಿನಿಯಮದ ಅಡಿಯಲ್ಲಿ, ಲೋಕಾಯುಕ್ತರು, ತಮ್ಮ ಪ್ರಕಾರ್ಯಗಳು ಮತ್ತು ಉಪಲೋಕಾಯುಕ್ತರ ಪ್ರಕಾರ್ಯಗಳ ನಿರ್ವಹಣೆಯ ಬಗ್ಗೆ ರಾಜ್ಯಪಾಲರಿಗೆ, ಒಂದು ಕ್ರೋಢೀಕೃತ ವಾರ್ಷಿಕ ವರದಿಯನ್ನು ಪ್ರತಿವರ್ಷದ ಅಕ್ಟೋಬರ್ 31ರಂದು ಅಥವಾ ಅದಕ್ಕೆ ಮೊದಲು, ಒಪ್ಪಿಸತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಸಭೆಯ ಮುಂದಿಡಲಾದ ಕಾಗದಪತ್ರಗಳ ಸಮಿತಿಯು ತನ್ನ 30ನೇ ವರದಿಯಲ್ಲಿ ಮಾಡಲಾದ ಶಿಫಾರಸ್ಸುಗಳ ಆಧಾರದ ಮೇಲೆ, ಲೋಕಾಯುಕ್ತರು ತಮ್ಮ ಪ್ರಕಾರ್ಯಗಳು ಮತ್ತು ಉಪಲೋಕಾಯುಕ್ತರ ಪ್ರಕಾರ್ಯಗಳ ನಿರ್ವಹಣೆಯ ಬಗ್ಗೆ ಒಂದು ಕ್ರೋಢೀಕೃತ ವಾರ್ಷಿಕ ವರದಿಯನ್ನು ಪ್ರತಿವರ್ಷದ ಅಕ್ಟೋಬರ್ 31ರಂದು ಅಥವಾ ಅದಕ್ಕೆ ಮೊದಲು ರಾಜ್ಯಪಾಲರಿಗೆ ಒಪ್ಪಿಸಲು, ಲೋಕಾಯುಕ್ತರಿಗೆ ಅವಧಿಯ ಮಿತಿಯನ್ನು ನಿಯಮಿಸಲು, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ (1985ರ ಕರ್ನಾಟಕ ಅಧಿನಿಯಮ 4) 12ನೇ ಪ್ರಕರಣದ (6)ನೇ ಉಪಪ್ರಕರಣದ ಉಪಬಂಧಗಳನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ಆರ್ಥಿಕ ವೆಚ್ಚವುಂಟಾಗುವುದಿಲ್ಲ.

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

**ಎಂ. ಗುರುರಾಜ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984ರ
## (1985ರ ಕರ್ನಾಟಕ ಅಧಿನಿಯಮ 4) ಉದ್ಧೃತ ಭಾಗ

**Xx xx xx**

**12. ಲೋಕಾಯುಕ್ತನ ವರದಿಗಳು, ಮೊದಲಾದುವು.-**

**Xx xx xx**

(6) ಲೋಕಾಯುಕ್ತರು, ತಮ್ಮ ಪ್ರಕಾರ್ಯಗಳು ಮತ್ತು ಉಪಲೋಕಾಯುಕ್ತರ ಪ್ರಕಾರ್ಯಗಳ ನಿರ್ವಹಣೆಯ ಬಗ್ಗೆ ರಾಜ್ಯಪಾಲರಿಗೆ, ಒಂದು ಕ್ರೋಢೀಕೃತ ವಾರ್ಷಿಕ ವರದಿಯನ್ನು ಒಪ್ಪಿಸತಕ್ಕದ್ದು.

**Xx xx xx**

ಸರ್ಕಾರಿ ಮುದ್ರಣಾಲಯ, ಸುವರ್ಣ ಸೌಧ, ಬೆಳಗಾವಿ, ಪಿ7, ಕಾಸೂ , 750–ಪ್ರತಿಗಳು 29ನೇ ಜೂನ್, 2015

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**EIGHTH SESSION**

# KARNATAKA LOKAYUKTA (AMENDMENT) BILL, 2015
**(L.A. Bill No. 24 of 2015)**

A Bill further to amend the Karnataka Lokayukta Act, 1984.

Whereas it is expedient further to amend the Karnataka Lokayukta Act, 1984 (Karnataka Act 4 of 1985) for the purposes hereinafter appearing;

Be it enacted by the Karnataka State Legislature in the sixty-sixth year of the Republic of India as follows:-

**1. Short title and commencement.-** (1) This Act may be called the Karnataka Lokayukta (Amendment) Act, 2015.

(2) It shall come into force at once.

**2. Amendment of section 12.-** In the Karnataka Lokayukta Act, 1984 (Karnataka Act 4 of 1985), in section 12, for sub-section (6), the following shall be substituted, namely:-

"(6) The Lokayukta shall present on or before 31$^{st}$ October of every year, a consolidated report on the performance of his functions and that of the Upalokayukta under this Act to the Governor."

## STATEMENT OF OBJECTS AND REASONS

It is considered necessary to amend the provisions of sub-section (6) of section 12 of the Karnataka Lokayukta Act, 1984, based on the recommendations made by the Committee on Papers Laid on the table on its $30^{th}$ Report, for prescription of time limit for the Lokayukta to present a consolidated report on the performance of his functions and that of the Upalokayukta to the Governor on or before $31^{st}$ October of every year.

Hence, the Bill.

## FINANCIAL MEMORANDUM

There is no extra financial expenditure involved in the proposed legislative measure.

**SIDDARAMAIAH**
CHIEF MINISTER

**M. GURURAJA**
Secretary
Karnataka Legislative Assembly

## ANNEXURE

## EXTRACT FROM THE KARNATAKA LOKAYUKTA ACT, 1984 (KARNATAKA ACT 4 OF 1985)

**XXX XXX XXX**

**12. Reports of Lokayukta, etc.,- XXX XXX**

(6) The Lokayukta shall present annually a consolidated report on the performance of his functions and that of the Upalokayukta under this Act to the Governor.

**XXX XXX XXX**

Government Press, Suvarna Soudha, Belagavi, P7, W.D. 83, Copies 750, 29th June, 2015